155 ಸೆ 6 ನಿ-72 (11)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಐವನ್ ಡಿ'ಸೋಜಾ ಇವರು ನಿಯಮ 72 ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆ ಸಂಖ್ಯೆ: 11 ಕ್ಕೆ ಮಾನ್ಯ ಇಂಧನ ಸಚಿವರ ಉತ್ತರ:** 4/RK 2204

**ವಿಷಯ :** ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಇತ್ತೀಚಿಗೆ ಮೆಸ್ಕಾಂ ವಿದ್ಯುತ್ ಕಂಬಗಳಲ್ಲಿ ರಿಲೇನ್ಸ್ ಕಂಪನಿಯ ಕೇಬಲ್‌ಗಳನ್ನು ಅಳವಡಿಸಿ ವಿದ್ಯುತ್ ಸಂಚಾರಕ್ಕೆ ತೊಂದರೆ ಉಂಟಾಗಿ 2 ರೀಕ್ಷಾ ಚಾಲಕರು ವಿದ್ಯುಚ್ಛಕ್ತಿ ಇಲಾಖೆಯ ವಾಯರ್‌ಗಳನ್ನು ತುಂಡಾಗಿ ಬಿದ್ದು, ಮೃತರಾದ ಘಟನೆ ಸಂಭವಿಸಿದ್ದು, ಮಂಗಳೂರು ಮಹಾನಗರದ ಎಲ್ಲಾ ಕಂಬಗಳಲ್ಲಿ ನೂರಾರು ವಾಯರ್ ನೇತಾಡಿ ಸರಿಯಾಗಿ ವ್ಯವಸ್ಥೆ ಇಲ್ಲದೇ ಅಪಾಯಕಾರಿ ಸ್ಥಿತಿಯಲ್ಲಿ ವಾಯರ್ ನೇತಾಡುವುದನ್ನು ಕೂಡಲೇ ತೆಗೆದು ಸಾರ್ವಜನಿಕರನ್ನು ಪ್ರಾಣಪಾಯದಿಂದ ಪಾರು ಮಾಡುವುದರ ದೃಷ್ಟಿಯಿಂದ ಇದೊಂದು ಸಾರ್ವಜನಿಕ ಮಹತ್ವವುಳ್ಳ ವಿಚಾರವಾಗಿರುವುದರಿಂದ ಮಾನ್ಯ ಇಂಧನ ಸಚಿವರಲ್ಲಿ ಪ್ರಸ್ತಾಪಿಸಿರುವ ಬಗ್ಗೆ

*****

**ಉತ್ತರ** :- ವಿದ್ಯುತ್ ಅಪಘಾತ ಉಂಟಾಗಿರುವ ಪ್ರದೇಶದಲ್ಲಿನ ಎಲ್ಲಾ ವಿದ್ಯುತ್ ಮಾರ್ಗಗಳನ್ನು ಭೂಗತ ಮಾರ್ಗವಾಗಿ ಪರಿವರ್ತಿಸಲಾಗಿದ್ದು, ದಾರಿದೀಪದ ವಾಹಕ ಮಾತ್ರ ಉಳಿದುಕೊಂಡಿರುತ್ತದೆ. ದಿನಾಂಕ:27.06.2024 ರಂದು ವಿಪರೀತ ಗಾಳಿ ಮಳೆಯಿಂದಾಗಿ ಪ್ರಾಕೃತಿಕ ವಿಕೋಪದಿಂದ ಆಕಸ್ಮಿಕವಾಗಿ ದಾರಿದೀಪದ ವಾಹಕ ತುಂಡಾಗಿ ಈ ಅಪಘಾತವು ಸಂಭವಿಸಿರುತ್ತದೆ. ಸದರಿ ವಿದ್ಯುತ್ ಮಾರ್ಗದಲ್ಲಿ ಯಾವುದೇ ಡಿಶ್ / OFC ಕೇಬಲ್ ಇದ್ದಿರುವುದಿಲ್ಲ.

ರಿಲಾಯನ್ಸ್ ಕಂಪನಿಯ ಹಾಗೂ ಇತರೆ ಡಿಶ್ / OFC ಕೇಬಲ್ ಕಂಪನಿಗಳಿಗೆ ವಿದ್ಯುತ್ ಕಂಬಗಳಲ್ಲಿ OFC ಕೇಬಲ್‌ಗಳನ್ನು ಅಳವಡಿಸಲು ಮೆಸ್ಕಾಂನಿಂದ ಅನುಮತಿಯನ್ನು ನೀಡುವಾಗ ಮಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ನಿರಾಕ್ಷೇಪಣಾ ಪತ್ರವನ್ನು ನೀಡಿರುವ ಬಗ್ಗೆ ದೃಢೀಕರಿಸಿಕೊಂಡು, ವಿದ್ಯುತ್ ಕಂಬಗಳಿಗೆ OFC ಕೇಬಲ್‌ಗಳನ್ನು ಅಳವಡಿಸುವಾಗ ಮಂಗಳೂರು ಮಹಾನಗರ ಪಾಲಿಕೆಯ ಮಾರ್ಗಸೂಚಿಗಳು, ಕೇಂದ್ರೀಯ ವಿದ್ಯುತ್ ಪ್ರಾಧಿಕಾರದ ಸುರಕ್ಷತಾ ನಿಯಮಗಳು ಹಾಗೂ ಇಂಡಿಯನ್ ಟೆಲಿಗ್ರಾಫ್ ರೈಟ್ ಆಫ್ ವೇ (ROW) ನಿಯಮಗಳನ್ನು ಪಾಲಿಸಲಾಗಿರುತ್ತದೆ ಹಾಗೂ ವಿದ್ಯುತ್ ಕಂಬಗಳಲ್ಲಿ ಈಗಾಗಲೇ ಅಳವಡಿಸಿರುವ ಡಿಶ್ / OFC ಕೇಬಲ್‌ಗಳಲ್ಲಿ ಸಾರ್ವಜನಿಕರಿಗೆ ತೊಂದರೆ ಹಾಗೂ ಅಪಾಯಕಾರಿ ಸ್ಥಿತಿಯಲ್ಲಿರುವ ಡಿಶ್ / OFC ಕೇಬಲ್ ಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಎನರ್ಜಿ 51 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು